ನಬೆದು ಹಾಸಿಗೆ ಹಿಡೀತಿ. ಹೇಳು ಏನಾಯ್ತು ಅಂತ..'

ಅಮ್ಮನ ಪಕ್ಕ ಕೂತು ಅವರ ಸೆರಗಿನಿಂದ ಕಣ್ಣೊರೆಸಿಕೊಂಡಿದ್ದ ರಾಮಚಂದ್ರ. ಅಮ್ಮನ ನಿಶ್ಶಕ್ತ ಕೈಗಳು ಅವನ ತಲೆ ಬೆಳಚಿದ್ದುವು. ಕಣ್ಣುಗಳಲ್ಲಿ ಹನಿಗೂಡಿದ್ದುವು.

'ಏನೋ ಆಗಬಾರದ್ದು ಆಗಿದೆ ಅಂತ ಅವತ್ತಿಂದಾನೇ ಅನುಮಾನ ಬಂದಿತ್ತು ನಂಗೆ. ಬಾಯ್ಬಿಟ್ಟು ಕೇಳಿದ್ರೆ ಏನಂದಿ ನೀನು? ಇನ್ನೊಂದೆರಡು ತಿಂಗ್ಳು ಬಿಟ್ಟು ಬರ್ತಾಳಂತೆ ಅಂದಿ. ಎರಡು ಹೋಗಿ ನಾಲ್ಕಾಯ್ತು. ಏನು ನಡೀತು ಹೇಳು..'

ಅಮ್ಮನ ಅನುನಯಕ್ಕೆ ಕರಗಿ ಎನ್ನುವುದಕ್ಕಿಂತಾ ಇಷ್ಟು ಕಾಲ ಹೊಟ್ಟೆಯೊಳಗಿಟ್ಟುಕೊಂಡು ಬೇಯುತ್ತಿದ್ದ ಸಂಗತಿಯನ್ನು ತನ್ನ ಪ್ರೀತಿಪಾತ್ರರ ಕಿವಿಗೆ ತಲುಪಿಸಿ ತನ್ನ ಸಂಕಟವನ್ನು ಒಂದಿಷ್ಟಾದರೂ ಕಮ್ಮಿ ಮಾಡಿಕೊಳ್ಳುವ ಉದ್ದೇಶದಿಂದ ಎಂಬಂತೆ ಮಾವನ ಮನೆಯಲ್ಲಿ ನಡೆದಿದ್ದ ಮಾತುಕತೆಗಳನ್ನೆಲ್ಲಾ ವರದಿ ಒಪ್ಪಿಸಿದ ರಾಮಚಂದ್ರ. ಕಾದ ಸೀಸ ಕಿವಿಗಳಿಗೆ ಬಿದ್ದಂತಾ ಮಾತುಗಳನ್ನು ತುಟಿ ಬಿಚ್ಚದೆ ಆಲಿಸಿದರು ರಾಧಮ್ಮ.

'ಹೇಳು ಅಮ್ಮಾ, ನಾನು ಮಾಡಿದ್ದು ಸರೀನಾ, ತಪ್ಪಾ?'

'ತಪ್ಪು..' ಕಡ್ಡಿ ಮುರಿದಂತೆ ಬಂತು ಉತ್ತರ. ಚಮಕಿತನಾಗಿ ತಾಯಿಯ ಮುಖ ನೋಡಿದ ರಾಮಚಂದ್ರ.

'ಅವ್ರಿಗೆ ಸರಿ ಅನ್ನಿದ್ದನ್ನ ಅವರು ಹೇಳಿದಾರೆ. ಮಗಳ ಬದುಕು ಹಾಳಾಗ್ಲಿ ಅಂತ ಯಾರಾರೂ ಅಂದ್ಕಳ್ಳೋಕೆ ಸಾಧ್ಯಾನಾ? ಈಗ್ಲೂ ಕಾಲ ಮಿಂಚಿ ಹೋಗಿಲ್ಲ. ನಮ್ಮ ಅನ್ನದ ಋಣ, ನೀರಿನ ಋಣ ಅಲ್ಲಿದೆ ಅಂತಾದ್ರೆ ಹೋಗೋದೇ..'

'ನೀನೇ ಅಲ್ವೇನೇ ಯಾರ್ದ್ಯಾರ ಕಾಲಬುಡಕ್ಕೋ ತಗಂಡ್ಹೋಗಿ ಹಾಕ್ಬೇಡ ಅಂತ ಹೇಳಿದ್ದು?'

'ಹೇಳಿದ್ದೆ ಹೌದು. ಹಂಗಂತ ನಿನ್ನ ಬದುಕು ಹಾಳು ಮಾಡ್ಕಂಡು ನನ್ನ ಸುಖ ಹುಡುಕ್ಕೊಳ್ಳೋಕೆ ಅಮ್ಮ ಅಂದ್ರೆ ಏನೂಂತ ಅಂದ್ಕಂಡಿದ್ದಿ? ಅವತ್ತು ಹಂಗನ್ನಿಸ್ತು, ಹೇಳ್ದೆ. ಇವತ್ತು ಹಿಂಗನ್ನಿಸ್ತಿದೆ, ಹೇಳ್ತಿದೀನಿ. ನಾನು ಹಿಂದಿದ್ದಷ್ಟು ಕಾಲ ಮುಂದೆ ಇರ್ಬೇಕಾಗಿದ್ಯನೋ? ಯಾವ ನಿಮಿಷಕ್ಕೂ ಕರೆ ಬಂದ್ರೆ ಆಶ್ಚರ್ಯ ಇಲ್ಲ. ನೀನು ಸುಖವಾಗಿರ್ಬೆ ಅಂತಾದ್ರೆ ಅಲ್ಲೇ ಹೋಗಿ ಕಾಲ ಹಾಕಿದ್ರಾಯ್ತು. ನನ್ನ ಚಿಂತೆ ಬ್ಯಾಡ ನಿಂಗೆ..'

'ಅಮ್ಮಾ.., ಅಮ್ಮಾ..' ಎನ್ನುತ್ತಾ ಅಮ್ಮನ ತೊಡೆಯ ಮೇಲೆ ತಲೆಯಿಟ್ಟು ಅದುವರೆಗಿನ ಒಳಗುದಿಗಳೆಲ್ಲಾ ಹೊರಚೆಲ್ಲುವಂತೆ ಅತ್ತುಬಿಟ್ಟಿದ್ದ ರಾಮಚಂದ್ರ.

'ನಡಿ, ಬೇಕಾರೆ ಇವತ್ತೇ ಹೊರಟುಬಿಡು. ಎಲ್ಲಾ ಒಂದು ತೀರ್ಮಾನ ಮಾಡ್ಕಂಡು ಬಾ..'

ಅಮ್ಮ ಹೇಳಿದ ಕೂಡಲೆ ರೆಕ್ಕೆ ಕಟ್ಟಿಕೊಂಡು ಹಾರಲಿಲ್ಲ ರಾಮಚಂದ್ರ. ಸ್ವಾಭಿಮಾನ ಅನ್ನುವುದು ಯಾರಪ್ಪನ ಮನೆಯದು? ನಮ್ಮಲ್ಲೇ ಹುಟ್ಟಿ ನಮ್ಮನ್ನೇ ಆಳುವಂತಾದ್ದು. ಅವರಾಗಿ ಮೊದ್ಲು ಫೋನ್ ಮಾಡ್ಲಿ. ನಾನೇ ಯಾಕೆ ತಗ್ಗಿ ಬಗ್ಗಿ ನಡೀಬೇಕು? ಎನ್ನುವ ನಿರೀಕ್ಷೆಯೊಡನೆ ಆವತ್ತು ಮಾವನ ಮನೆಗೆ ಹೋಗಿದ್ದಾಗ ಅನಿಸಿದ್ದ ಭಾವನೆಗಳು ತೀವ್ರತೆ ಕಳೆದುಕೊಳ್ಳದೆ ನೆನಪಿಸಿಕೊಂಡಾಗಲೊಮ್ಮೆ ಮನಸ್ಸನ್ನು ಘಾಸಿಗೊಳಿಸುತ್ತಲೇ ಇತ್ತು. ನಾನೇ ಯಾಕೆ ತಗ್ಗಿ ನಡೀಬೇಕು? ಉತ್ತರ ಸಿಗದ ಪ್ರಶ್ನೆ ಮನಸ್ಸಲ್ಲಿ ಅನುರಣಿಸುತ್ತಿತ್ತು. ಈ ಅಮ್ಮ ಕೂಡಾ ನಿಂತ ಮೆಟ್ಟಿಗೆ ಹೀಗೆ ತೀರ್ಮಾನ ಕೊಟ್ಟಿದ್ದಲ್ಲ ಎಂದು ಅವನ ಅಂತರಂಗಕ್ಕೆ ಗೊತ್ತಿದೆ. ಹೀಗಾಗಿರಬಹುದೆಂದು ಯೋಚಿಸಿ, ಹೀಗಾಗಿದ್ದರೆ ಏನು ಮಾಡಬೇಕೆಂದು ಮನದಲ್ಲೇ ಮಥಿಸಿ, ಮಗನ ಒಳಿತಿಗಾಗಿ ಬಗ್ಗಲು ತೀರ್ಮಾನಿಸಿದ್ದಾಳೆ ತನ್ನಮ್ಮ. ಒಬ್ಬ ಅಮ್ಮ ತನ್ನ ಸಂತಾನದ ಸುಖಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧ ಅನ್ನುವಂತವಳಾದರೆ ಮತ್ತೊಬ್ಬ ಅಮ್ಮ ತನ್ನ ಸಂತಾನದ ಅಗಲಿಕೆಯನ್ನು ತಪ್ಪಿಸಿಕೊಳ್ಳಲು ಏನು ಮಾಡಲೂ ಸಿದ್ಧ ಅನ್ನುವಂತವಳು. ವಿಚಿತ್ರ ಜಗತ್ತು.

ಅಮ್ಮ ಎಷ್ಟೇ ಒತ್ತಡ ತಂದರೂ ಅಡಿಕೆಕೊಯ್ಲು ಮುಗಿಯುವವರೆಗೆ ಮನೆ ಬಿಟ್ಟು ಹಂದಲಿಲ್ಲ ರಾಮಚಂದ್ರ. ತನ್ನ ನಿಲುವು ದಿನೇ ದಿನೇ ಅಮ್ಮನಲ್ಲಿ ಚಡಪಡಿಕೆಯ ಭಾವವನ್ನು ಹುಟ್ಟು ಹಾಕಿ ಅವಳ ಆರೋಗ್ಯವನ್ನು ಹದಗೆಡಿಸುತ್ತಿರುವುದು ಅರಿವಾಗುತ್ತಿದೆ ಅವನಿಗೆ. ನಿಧನಿಧಾನವಾಗಿ ಬಗ್ಗಲು ಸಿದ್ಧನಾಗುತ್ತಿದ್ದಾನೆ ರಾಮಚಂದ್ರ.

'ಒಂದು ಫೋನ್ ಕರೆ. ಒಂದೇ ಒಂದು ಫೋನ್ ಕರೆ. ಬರಲ್ಲನ್ರೀ?' ಎನ್ನುವ ಒಂದು ಪದ ತನ್ನ ಸಂಯಮದ ಕಟ್ಟೆಯನ್ನು ಕೊಚ್ಚಿ ಹಾಕುವಂತಹಾ ಪರಿಸ್ಥಿತಿಗೆ ತಲುಪತೊಡಗಿದ್ದಾನೆ ರಾಮಚಂದ್ರ. ಆವತ್ತಿನ ತನ್ನ ವರ್ತನೆ ದುಬಾರಿಯಾಯ್ತಾ? ಒಲುಮೆಯಿಂದ ಬಳಿ ಬಂದವಳನ್ನು ಅವಮಾನಿಸಿದ ಪ್ರಸಂಗದಿಂದ ನಾಗಶ್ರೀ ಹೆಸರಿಗೆ ತಕ್ಕಂತೆ ಪೆಟ್ಟು ತಿಂದ ಹಾವಿನಂತಾಗಿದ್ದಾಳೆಯೇ? ಹೆಣ್ಣು ಮನಸ್ಸಿನ ಬಗ್ಗೆ ಅವನು ಅಜ್ಞ.

* * *

## ಸಂಸಾರ ಮೂರಾಬಟ್ಟೆ

ಅಡಿಕೆ ಕುಯ್ಲಿನ ಅವಾಂತರ ಮುಗಿಯಿತು. ಅಡಿಕೆ ಆರಿಸಿ ಮಾರಾಟ ಮಾಡಿದ್ದಾಯ್ತು. ವರ್ಷಾವಧಿ ಖರ್ಚಿಗೆ ಇಷ್ಟು ಸಾಕು ಎನ್ನುವ ಅಂದಾಜಿನೊಡನೆ ಉಳಿಕೆಯಾಗಿದ್ದನ್ನು ಸಾಲಕ್ಕೆ ಕಟ್ಟಿ ಬಡ್ಡಿಯ ಹೊರೆ ಕಡಿಮೆ ಮಾಡಿಕೊಂಡಿದ್ದಾಯ್ತು.

'ಇನ್ನಾರೂ ಹೋಗ್ಬಾರೋ.., ಇನ್ನಾರೂ ಹೋಗ್ಬಾರೋ..' ಗೋಗರೆಯುತ್ತಿದ್ದಾಳೆ ಅಮ್ಮ. ಮಗನ ಸಂಸಾರ ಮೂರಾಬಟ್ಟೆಯಾಗುತ್ತಿರುವುದನ್ನು ಕಂಡು ಅವಳ ಜೀವ ತಲ್ಲಣಿಸಿ ಹೋಗಿದೆ.

ಸೋಲೋದು, ಗೆಲ್ಲೋದು ಅನ್ನೋಕೆ ಇದೇನು ಯುದ್ಧ ಅಂದ್ಕಂಡಿದೀಯಾ? ಯಾರು ಸೋಲ್ತಾರೋ ಅವರು ಗೆದ್ದ ಹಾಗೆ.. ಮಾತಿಗೆ ಹೇಳಿದ್ದಾ ಅಮ್ಮ? ಏನೇ ಇರಲಿ, ಅಮ್ಮನಿಗೋಸ್ಕರ ಎನ್ನುವ ಹಣೆಪಟ್ಟಿ ಹಚ್ಚಿ ಮಾವನ ಮನೆಗೆ ಹೋಗಲು ಮಾನಸಿಕವಾಗಿ ಮಾತ್ರವಲ್ಲ, ದೈಹಿಕವಾಗಿಯೂ ಸಿದ್ಧನಾದ ರಾಮಚಂದ್ರ. ಯಾಕೋ ಕೈಕಾಲುಗಳಲ್ಲಿ ನಡುಕ ಶುರುವಾಗಿದೆ. ಮೊದಲೇ ಒಂದು ಫೋನ್ ಮಾಡಿ ಹೋಗುವುದಾ? ಬೇಡ, ಬೇಡ. ಮುಖತಃ ಭೇಟಿಯಾಗುವುದು ಅಂದ ಮೇಲೆ ಫೋನ್ ಯಾಕೆ?

ಒಬ್ಬ ಮನುಷ್ಯನಿಗಾಗುವ ಗರಿಷ್ಠ ಮಟ್ಟದ ಅವಮಾನ ಅಂದರೆ ಯಾವುದು? ಮನೆ ಬಾಗಿಲಿಗೆ ಬಂದಾಗ ಮನೆಯೊಳಗಿದ್ದೂ ಬಾಗಿಲು ತೆಗೆಯದಿರುವುದು. ಎಂತವರ ಸ್ವಾಭಿಮಾನ ಕೂಡಾ ಮುರಿದು ಹೋಗಲು ಮಾತಿಲ್ಲದೆಯೇ ಘಟಿಸುವ ಇಂತಾದ್ದೊಂದು ಕೃತ್ಯ ಸಾಕೇ ಸಾಕು. ಸಂಬಂಧ ಜೋಡಿಸಲು ಉತ್ಸುಕವಾಗಿರುವ, ಅಥವಾ ಅರೆಬರೆಯಾಗಿ ಸಿದ್ಧವಾದ ಮನಸ್ಸು ಮುರಿದು ಭಗ್ನವಾಗಿಬಿಡುತ್ತದೆ. ನಿನ್ನ ದೊಡ್ಡಸ್ತಿಕೆ ಇದ್ರೆ ನಿನ್ನ ಮನೇಲಿಟ್ಕೋ ಎನ್ನುವಂತಾ ತಿರಸ್ಕಾರ ಭಾವನೆ ಮನಸ್ಸನ್ನು ಆವರಿಸಿಬಿಡುತ್ತದೆ. ರಾಮಚಂದ್ರ ಊಹಿಸಿಯೇ ಇರದಿದ್ದ ಇಂತಾದ್ದೊಂದು ಘಟನೆಗೆ ಬಲಿಪಶುವಾಗಬೇಕಾಗಿ ಬಂದು ಅವನು ಸಂಪೂರ್ಣವಾಗಿ ಮಡದಿ, ಮಕ್ಕಳಿಂದ ವಿಮುಖನಾಗಿಬಿಟ್ಟ. ಅಮ್ಮನ ಮಾತಿಗೆ ಬೆಲೆ ಕೊಟ್ಟು ಹೆಂಡತಿಯ ಊರಿಗೆ ಹೊರಟವನಿಗೆ ಬಸ್ಸು ಹತ್ತಿ ಕುಳಿತಾಗ ವಿಚಿತ್ರ ತಳಮಳ. ಬಸ್ಸಿಳಿದು ಇಲ್ಲಿಂದಲೇ ವಾಪಸು ಹೋಗಿಬಿಡಲೇ ಎನ್ನುವಂತಾ ದ್ವಂದ್ವ. ತನ್ನದೇನು ತಪ್ಪಿದೆ ಎಂದು ಅವರು ಹಟ ಸಾಧಿಸುತ್ತಿದ್ದಾರೆ? ಒಬ್ಬರ ಇಚ್ಛೆಗೆ ಮಣಿಯುವುದರಿಂದಷ್ಟೇ ಅವರ ಪಾಲಿಗೆ ಒಳ್ಳೆಯವನೆನಿಸಿಕೊಳ್ಳಲು ಸಾಧ್ಯ ಅಂತಾದರೆ ಹೀಗೆ ಎಲ್ಲಿಯವರೆಗೆ ಡೊಗ್ಗಾಲೂರುತ್ತಲೇ ಇರಲು ಸಾಧ್ಯ? ಕಡೆಯವರೆಗೆ ಒಂದು ಫೋನು.., ಒಂದು ಫೋನು.. ಎಂದು ಕನವರಿಸುತ್ತಲೇ ರಾಮಚಂದ್ರ ಮಾವನ

## ಮಣ್ಣು

ಮನುಷ್ಯನಿಗೆ
ಮಣ್ಣಿನ ಮೇಲಾಸೆ
ಮಣ್ಣಿಗೂ
ಮನುಷ್ಯನ ಮೇಲಾಸೆ
ಕೊನೆಗೆ ಗೆಲ್ಲುವುದು
ಮಣ್ಣೇ ಹೊರತು
ಮನುಷ್ಯನಲ್ಲ..!

★ ವಿ.ಹೇಮಂತ ಕುಮಾರ್



ಶಿಲ್ಪಾ